S C.R.P.67

| Form No.4<br>(Criminal)<br>Deposition<br>Sheets<br>(R.P.No.57) |
|---|

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ ೩೪/2025

**ಚಾ.ಸಾ.–7 ಪ್ರಾ.ಸಾ.–12**

| | |
|---|---|
| **ಸಾಕ್ಷಿದಾರರ ಹೆಸರು** | **ಪ್ರಶಾಂತ** |
| **ತಂದೆಯ ಹೆಸರು** | **ಕಾಳಯ್ಯ** |
| **ವಯಸ್ಸು** | **28 ವರ್ಷಗಳು** |
| **ಉದ್ಯೋಗ** | **ಖಾಸಗಿ ಕೆಲಸ** |
| **ವಾಸ** | **ಗೊರವನಹಳ್ಳಿ** |

**ದಿನಾಂಕಃ 06.07.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 ರವರ ಪರಿಚಯ ನನಗೆ ಇದೆ. ಅವರು ನಮ್ಮ ಊರಿನವರು. ಈಗ ನನಗೆ ತೋರಿಸುತ್ತಿರುವ ನಿಪಿ 4 ಮಹಜರಲ್ಲಿರುವ ಸಹಿ ನನ್ನದು. ಸಾಕ್ಷಿ ಸಹಿಯನ್ನು ನಿಪಿ 4 ಸಿ ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ನಾನು ಕಂಡುಬರುತ್ತೇನೆ. ಸದರಿ ಭಾವಚಿತ್ರದಲ್ಲಿ ಪ್ರಶಾಂತ ಮತ್ತು ವೆಂಕಟೇಶ ಹಾಗೂ ನಾನು ಕಂಡುಬರುತ್ತೇವೆ. ಅದನ್ನು ಗೊರವನಹಳ್ಳಿಯಲ್ಲಿ ಒಂದು ತೋಟದ ಬಳಿ ತೆಗೆಯಲಾಗಿದೆ. ಪೊಲೀಸರು ಅಲ್ಲಿಗೆ ಬಂದಿದ್ದರು ಯಾವ ವಿಚಾರಕ್ಕೆ ಬಂದಿದ್ದರು ಗೊತ್ತಿಲ್ಲ. ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅದರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ಸ್ಥಳದಲ್ಲಿ ಏನನ್ನು ಕೈಯಲ್ಲಿ ಹಿಡಿದುಕೊಂಡಿದ್ದರು ಏನು ತೆಗೆದುಕೊಂಡು ಹೋದರು ಗೊತ್ತಿಲ್ಲ. ಸ್ಥಳ ಯಾರು ತೋರಿಸಿಕೊಟ್ಟಿದ್ದಾರೆ ಗೊತ್ತಿಲ್ಲ. ನ್ಯಾಯಾಲಯದಲ್ಲಿರುವ ಎಂಒ 1 ನಾನು ಈ ಮೊದಲು ನೋಡಿಲ್ಲ. ಅದನ್ನು

ಪೊಲೀಸರಿಗೆ ಯಾರು ಕೊಟ್ಟರು ಎಲ್ಲಿಂದ ತೆಗೆದುಕೊಂಡರು ಗೊತ್ತಿಲ್ಲ. ನಿಪಿ 4 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ಸದರಿ ದಾಖಲೆಯನ್ನು ಗೊರವನಹಳ್ಳಿಯ ಕೆಮ್ಮಣ್ಣು ಕಾಲುವೆ ಪಕ್ಕದಲ್ಲಿರುವ ಶಿವಪ್ಪರವರ ತೆಂಗಿನ ತೋಟದಲ್ಲಿ ಬರೆಯಲಾಗಿರುತ್ತದೆ ಎಂದರೆ ಗೊತ್ತಿಲ್ಲ. ದಿಃ 21.3.2025 ರಂದು ಪೊಲಿಸರು ಆ ಸ್ಥಳಕ್ಕೆ ಕರೆಸಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರು ಅದೇ ಜಾಗದಲ್ಲಿ ಆರೋಪಿತರು ಆತನನ್ನು ಹಲ್ಲೆ ಮಾಡಿದ ಜಾಗವೆಂದು ಪೊಲೀಸರಿಗೆ ತೋರಿಸಿಕೊಟ್ಟರು ಎಂದರೆ ಸರಿಯಲ್ಲ. ಗೊದಮೊಟ್ಟೆಯನ್ನು ತೋರಿಸಿ ಇದೇ ಗೊದಮೊಟ್ಟೆಯಿಂದ ನನಗೆ ಹಲ್ಲೆ ಮಾಡಲಾಗಿದೆ ಎಂದು ಚಾಸಾ 1 ಪೊಲೀಸರಿಗೆ ಕೊಟ್ಟರು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಮುಮಾ 1 ನ್ನು ಸ್ವಾಧೀನಪಡಿಸಿಕೊಂಡು ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಸೀಲು ಮಾಡಿದರು ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ನಿಪಿ 4 ನನ್ನ ಸಮಕ್ಷಮ ಬೆಳಗ್ಗೆ 11.50–ಮದ್ಯಾಹ್ನ 12.30 ವರೆಗು ಬರೆದರು ಎಂದರೆ ಸರಿಯಲ್ಲ. ನಿಪಿ 4 ನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ 5 ಭಾವಚಿತ್ರಗಳನ್ನು ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ಮುಮಾ 1 ನ್ನು ಸ್ಥಳದಲ್ಲಿ ನಾನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರ ಜೊತೆ ಚೆನ್ನಾಗಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ